# ಆಹಾ ಸುದ್ದಿ!

★ ಸಸಿತೋಟ



ಚೀನಾದ ಶಾಂಡೋಂಗ್ ಪ್ರಾಂತ್ಯದ ಈ ಆಡಿಗೆ ಗುಂಡು ಏರಿಸಿ ಓಲಾಡುವ ಗಮ್ಮತ್ತು. ಒಂದೇ ಏಟಿಗೆ ನಾಲ್ಕು ನಾಲ್ಕು ಬಾಟಲ್ ಬೀಯರ್ ಹೊಟ್ಟೆಗಿಳಿಸುತ್ತದಂತೆ. ಕಾಡು ಪ್ರಾಣಿಗಳಾದರೆ ಹಳ್ಳಿಗಳ ಗಡಂಗಿಗೆ ಆಗಾಗ ಭೇಟಿ ಕೊಟ್ಟು ಶೇಂದಿ, ಕಳ್ಳಭಟ್ಟಿ ಎಂದು ಕದ್ದು ಏರಿಸುತ್ತವೆ. ಪಾಪ, ಈ ಸಾಕುಪ್ರಾಣಿಗೆ, ಅದೂ ನಗರದಲ್ಲಿ ನಾಗರಿಕತ್ವ ರೂಢಿಸಿಕೊಳ್ಳಬೇಕಾದ ಕರ್ಮ. ಅದಕ್ಕೇ ಹೆಚ್ಚು ನಶೆ ಏರದ ಬೀಯರ್ ಸಿಪ್ ಮಾಡುತ್ತಿದೆ.

ಟರ್ಕಿಯ ಬೀಚ್‌ನಲ್ಲಿ ಬಿಕಿನಿಗಳೆಲ್ಲ ಬೆದರಿ ನಿಂತಿದ್ದರು. ಅಲೆಗಳ ಮೇಲೆ ತೇಲುತ್ತಿತ್ತು ಬಿಕಿನಿ ಬಿಚ್ಚಿ ಒಗೆದ ಅಲೆಗೂದಲಿನ ಸುಂದರಿಯ ದೇಹ. ಪೊಲೀಸರು ಇಡೀ ಬೀಚ್ ಸುತ್ತುವರಿದು ದೇಹವನ್ನು ದಡಕ್ಕೆ ಎಳೆದು ಹಾಕಿದರು. ಜೀವವೂ ಇರಲಿಲ್ಲ, ಜೀವಂತಿಕೆಯೂ ಇರಲಿಲ್ಲ. ಅದೊಂದು ಸೆಕ್ಸ್ ಬೊಂಬೆ. ಬಳಸಿದವರಿಗೆ ಬೇಸರ ಬಂದು ಒಗೆದ ಎನ್ನುವ ಹಾಗೂ ಇಲ್ಲ. ಯಾರು, ಎಲ್ಲಿಂದ ಎಂದೆಲ್ಲ ತನಿಖೆ ಮುಂದುವರಿಯುತ್ತಿದೆಯಂತೆ.



ಮೆಕ್ಸಿಕೋದ 'ಮಾಯಾವಿನಿ' ಎಂದೇ ಕರೆಸಿಕೊಳ್ಳುವ ಈ ಟ್ಯಾಟ್ಟೂ ಕಲಾವಿದೆ ಮಾರಿಯಾ ಜೋಸ್ ಮೈತುಂಬ ಹಚ್ಚೆ ಹಾಕಿಸಿಕೊಂಡು ನೋಡುಗರ ಹುಚ್ಚೆಬ್ಬಿಸುತ್ತಿದ್ದಾಳೆ. ಮೈಮೇಲೆ ಜಾಗ ಸಾಲದೆ, ಚರ್ಮದ ಅಡಿಯಲ್ಲೂ ಮೊಳೆ, ಚೆಂಡು ಎಂದೆಲ್ಲ ಒಳಸೇರಿಸಿಕೊಂಡು ರಣಚಂಡಿಯಂತೆ ಕಾಣಿಸಿಕೊಳ್ಳುವ ಹುಚ್ಚೇಕೋ!



ಥೈಲೆಂಡ್ ಅಂದರೆ ಅಣಬೆಯಂತೆ ಹಬ್ಬಿಕೊಂಡಿರುವ ಮಸಾಜ್ ಪಾರ್ಲರ್‌ಗಳು ಕಣ್ಮುಂದೆ ಕಟ್ಟಿಕೊಳ್ಳುತ್ತವೆ. ಪ್ರವಾಸಿಗರು ಈ ಅಣಬೆಯೊಳಗಿನ ಕಣಗಳ ರೀತಿ ಕಳೆದುಹೋಗುವಂತೆ ಮಾಡುವುದು ಅಲ್ಲಿಯ ಜಾದೂ ಕೈಗಳಲ್ಲಿದೆ. ರಾಜಧಾನಿ ಬ್ಯಾಂಕಾಕ್‌ನಲ್ಲಿ ಮಾತ್ರ ಇತ್ತೀಚೆಗೆ ನಡೆದ ಮಸಾಜ್ ದಾಖಲೆ ರಾಂಗ್ ಮೆಸೇಜ್ ನೀಡಿದಂತಿದೆ. ಇಷ್ಟು ಖುಲ್ಲಂ ಖುಲ್ಲಾ ಆಗಿ ಮಸಾಜ್ ಎಂದರೆ....!

ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಬಾನ್ ಕಿ ಮೂನ್ ವಿಶ್ವಸಂಸ್ಥೆ ಜನರಲ್ ಅಸೆಂಬ್ಲಿಯಲ್ಲಿ ಜಾಗತಿಕ ನಾಯಕರ ಜೊತೆ ಸಭೆ ನಡೆಸುತ್ತಿದ್ದಾಗ ಕೆನಡಾ ಪ್ರಧಾನಿ ಹಾರ್ಪರ್ ಎಂದು ಹೇಳಿಕೊಂಡು ಫೋನ್ ಬಂತು. ಕೂದಲಿಗೆ ಜೆಲ್ ಹಚ್ಚಿ ಸೆಟ್ ಮಾಡಿಕೊಂಡು ಬರುವುದರಿಂದ ಸಭೆಗೆ ಐದೇ ನಿಮಿಷ ತಡ ಎಂದರಂತೆ ನಕಲಿ ಹಾರ್ಪರ್. ನಂಬಿದರು ಮೂನ್. ಆದರೆ ಹಾಕಿ ತಂಡ ಎಂದು ಮತ್ತೆ ಮಾತು ಶುರು ಮಾಡಿದಾಗ ಲೇವಡಿ ಎಂದು ಗೊತ್ತಾಯಿತಂತೆ. ಮೂನ್ ಬಾನಲ್ಲಿ ಚಂದ್ರಮನಾಗಿ ಹೊಳೆಯುವ ಬದಲು ಮೋಡದ ಹಿಂದೆ ಓಡಿಹೋಗುವುದೊಂದು ಬಾಕಿ.

ಅಫ್ಘಾನಿಸ್ತಾನದಲ್ಲಿ ಎಕೆ- 47 ಎಂದರೆ ಮಕ್ಕಳಾಟಿಕೆಯಿದ್ದಂತೆ. ನಿತ್ಯ ಖಾಲಿಯಾಗುವ ಗುಂಡುಗಳ ಚೀಲ ವಿಲೇವಾರಿಗೆ ಅಲ್ಲಿಯ ಅಧಿಕಾರಿಗಳು ಬೆಂಗಳೂರಿನ ಕಸ ವಿಲೇವಾರಿಯಂತೆ ಒದ್ದಾಡಲಿಲ್ಲ. ನೀಟಾಗಿ ಕತ್ತರಿಸಿ ಹೊಲಿದ 'ಫ್ಲಿಪ್ ಫ್ಲಾಪ್' ಚಪ್ಪಲಿಗಳು ಈ ಚೀಲದಿಂದ ತಯಾರಾಗುತ್ತಿವೆ. ಅದೂ ಅಮೆರಿಕದಲ್ಲಿ ಬೀಚ್‌ನಲ್ಲಿ ಅಡ್ಡಾಡುವವರ ಪಾದಗಳಿಗೆ ಜೋಡಿಯಾಗಿ.

